# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103. ಫ್ಯಾಕ್ಸ್ : 0816–2255761, ದೂರವಾಣಿ : 2272280

**email : tudatmk2009@yahoo.co.in - website: tuda.co.in**

ನಂ. ಟಿಯುಡಿಎ/ಎಡಿಎಂ/ವಾ.ಸ.ಕೆಎ06–ಎಂ2020/805/2014–15 ದಿನಾಂಕ 16–07–2014

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

**ವಿಷಯ :** ಪ್ರಾಧಿಕಾರಕ್ಕೆ ಸೇರಿದ ಪೆಟ್ರೋಲ್ ಅಂಬಾಸಿಡರ್ ಕಾರ್ ಸಂಖ್ಯೆ ಕೆ.ಎ.06 ಎಂ. 2020 ನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ** : ಸರ್ಕಾರದ ಪತ್ರ ಸಂಖ್ಯೆ ನಅಇ/328/ಬೆಂರೂಪ್ರಾ/2010 ದಿನಾಂಕ 27–12–2010

* * *

ಈ ಕೆಳಕಂಡ ಸುಸ್ಥಿಎಇಯಲ್ಲಿರುವ ಪೆಟ್ರೋಲ್ ಅಂಬಾಸಿಡರ್ ಕಾರ್ ಸಂಖ್ಯೆ ಕೆ.ಎ.06 ಎಂ. 2020 ನ್ನು ಅದು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ದಿನಾಂಕ 30–07–2014 ರಂದು ಬೆಳಿಗ್ಗೆ 11.30 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುತ್ತದೆ.

| **ವಾಹನ ಸಂಖ್ಯೆ** | **ತರಹೆ ಮತ್ತು ಮಾದರಿ** | **ಹರಾಜು ಮಾಡುವ ಅಧಿಕಾರಿಗಳು ಮತ್ತು ಹರಾಜು ಸ್ಥಳ** |
|---|---|---|
| ಕೆಎ–06 ಎಂ–2020 | ಪೆಟ್ರೋಲ್ ಅಂಬಾಸಿಡರ್ ಕಾರ್ 1998 ನೇ ಮಾದರಿ | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಆವರಣ |

## ನಿಬಂಧನೆಗಳು :

1) ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ. 5000/– (ಐದು ಸಾವಿರ ರೂಪಾಯಿಗಳು ಮಾತ್ರ) ಠೇವಣಿಯಾಗಿ ನಗದು ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು.
2) ಬಹಿರಂಗ ಹರಾಜಿನ ದಿನ ಬಿಡ್‌ದಾರರು ಮುಂಚಿತವಾಗಿ ರಸೀತಿಯನ್ನು ಹಾಜರುಪಡಿಸಿ ಬಿಡ್‌ನಲ್ಲಿ ಭಾಗವಹಿಸುವುದು.
3) ಬಿಡ್‌ದಾರರು ಹಾಜರಾಗದಿದ್ದಲ್ಲಿ ಠೇವಣಿದಾರರ ಅಧಿಕೃತ ಬರವಣಿಗೆ ಪಡೆದು ಅವರ ಪರವಾಗಿ ಒಬ್ಬರು ಏಜೆಂಟರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.
4) ಹರಾಜು ಆಖೈರಾದ ಕೂಡಲೇ ಅಂತಿಮ ಬಿಡ್‌ದಾರರು ಬಿಡ್ ಮೊಬಲಗಿನಲ್ಲಿ ಶೇಕಡ 50 ರ ಭಾಗ ಹಣವನ್ನು ಕೂಡಲೆ ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು.
5) ಅಧಿಕೃತ ಬಿಡ್‌ದಾರರು ಶೇಕಡ 50 ರ ಭಾಗ ಹಣವನ್ನು ಪಾವತಿ ಮಾಡದಿದ್ದಲ್ಲಿ ಸದರಿ ವಾಹನವನ್ನು ಮತ್ತೆ ಬಹಿರಂಗ ಹರಾಜು ಮಾಡಲಾಗುವುದು. ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6) ಅಂತಿಮ ಬಿಡ್ ನಿರ್ಣಯವು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸೇರಿರುತ್ತದೆ.
7) ಉಳಿದ ಶೇಕಡ 50 ರ ಭಾಗದ ಹಣವನ್ನು 7 ದಿನಗಳಲ್ಲಿ ಪೂರ್ತಿ ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು. ವಾಯಿದೆ ಮೀರಿದಲ್ಲಿ ಮೊದಲು ಕಟ್ಟಿದ ಶೇಕಡ 50 ರ ಭಾಗದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

8) ಅಂತಿಮ ಬಿಡ್‌ದಾರರು ವಾಹನವನ್ನು ಪಡೆಯುವ ಮುನ್ನಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನ ಮಾಲೀಕತ್ವದ ಬದಲಾವಣೆಗೆ ನಿಗಧಿತ ನಮೂನೆಯಲ್ಲಿ ಅನುಮತಿ ಪಡೆಯತಕ್ಕದ್ದು ಹಾಗೂ ಎಫ್.ಸಿ.ಯನ್ನು ಸಮಕ್ಷಮ ಪ್ರಾಧಿಕಾರದಿಂದ ಪಡೆಯತಕ್ಕದ್ದು.
9) ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಆಯುಕ್ತರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯತಕ್ಕದ್ದು.
10) ವಾಹನವನ್ನು ಪರೀಕ್ಷಿಸಲು ಇಷ್ಟವುಳ್ಳವರು ಕಛೇರಿ ವೇಳೆಯಲ್ಲಿ ಆಯುಕ್ತರ ಅನುಮತಿ ಪಡೆದು ಪರೀವೀಕ್ಷಿಸಬಹುದು.
11) ಬಿಡ್ ಮೊಬಲಗಿಗೆ ಮಾರಾಟ ತೆರಿಗೆಯನ್ನು ಪಾವತಿ ಮಾಡಬೇಕು.
12) ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರ ಪ್ರಾಧಿಕಾರದ ಆಯುಕ್ತರದ್ದಾಗಿರುತ್ತದೆ.
13) ವಾಹನವು ಯಾವ ಸ್ಥಿತಿಯಲ್ಲಿದೆಯೋ, ಎಲ್ಲಿದೆಯೋ, ಹೇಗಿದೆಯೋ, ಹಾಗೆಯೇ ವಿಲೇ ಮಾಡಲಾಗುವುದು.

ಸಹಿ/–
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಪ್ರತಿಯನ್ನು :–**

1. ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತುಮಕೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ಹೆಚ್ಚುವರಿ ಪ್ರತಿಗಳು.

ಸಹಿ/–
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.